# ನವರಾತ್ರಿಗೆ ದಾಂಡಿಯಾ ಸಾಥ್





ನವರಾತ್ರಿಯಲ್ಲಿ ಒಂಭತ್ತು ದಿನಗಳಕಾಲ ಒಂಭತ್ತು ರಾತ್ರಿ ದುರ್ಗೆಯನ್ನು ಪೂಜಿಸಲಾಗುತ್ತದೆ. ದುರ್ಗೆಯ ಬೇರೆ ಬೇರೆ ಅವತಾರಗಳಲ್ಲಿ ಅಲಂಕರಿಸಿ ಈ ಶುಭ ಸಂದರ್ಭದಲ್ಲಿ ತಾಯಿಗೆ ಪೂಜೆ ಸಲ್ಲಿಸಲಾಗುತ್ತದೆ.

ದುರ್ಗೆಯು ಕೆಟ್ಟದ್ದನ್ನು ದಮನಿಸಿ ಒಳಿತನ್ನು ವಿಜೃಂಭಿಸುವುದಕ್ಕಾಗಿ ಅವತಾರಗಳನ್ನು ತಾಳುತ್ತಾಳೆ. ಮಾತೆ ಪಾರ್ವತಿಯೇ ಬೇರೆ ಬೇರೆ ರೂಪಗಳನ್ನು ಧರಿಸಿ ಅಸುರ ಸಂಹಾರವನ್ನು ಮಾಡಿ ಅಲ್ಲಿನ ಜ್ಞಾನ ದೀಪವನ್ನು ಬೆಳಗಿಸಿದ್ದಾಳೆ. ನವರಾತ್ರಿ ಹಿಂದೂಗಳ ಪ್ರಮುಖ ಉತ್ಸವವಾಗಿದ್ದು ಪ್ರತಿವರ್ಷ ದೇಶಾದ್ಯಂತ ವಿವಿಧ ಶೈಲಿಗಳಲ್ಲಿ ಆಚರಿಸಲಾಗುತ್ತದೆ. ಈ ಹಬ್ಬವನ್ನು ಆಚರಿಸಲು ವಿವಿಧ ರಾಜ್ಯಗಳು ವಿವಿಧ ಹೆಸರು ಮತ್ತು ವಿವಿಧ ಸಂಪ್ರದಾಯಗಳನ್ನು ಹೊಂದಿವೆ. ಭಾರತದ ದಕ್ಷಿಣ ಭಾಗದಲ್ಲಿ, ನವರಾತ್ರಿ ಹಬ್ಬವನ್ನು ಬೊಂಬೆ ಹಬ್ಬ ಎಂದು ಕೂಡಾ ಕರೆಯುತ್ತಾರೆ.

ಈ ಹಬ್ಬವನ್ನು 10 ದಿನಗಳ ಕಾಲ ಆಚರಿಸಲಾಗುತ್ತದೆ. ವಿಜಯದಶಮಿ ಅಥವಾ ದಸರಾ ದಿನದಂದು ಹಬ್ಬ ಸಂಪನ್ನ. ಅಸುರರ ವಿರುದ್ಧ ಹೋರಾಡಿದ ದುರ್ಗಾಮಾತೆಯನ್ನು ವಿವಿಧ ಅವತಾರಗಳಲ್ಲಿ ಶೃಂಗರಿಸಿ ಪೂಜಿಸುತ್ತಾರೆ. ಮಹಿಳೆಯರು ತಮ್ಮ ತಮ್ಮ ಮನೆಯಲ್ಲಿ ಪೂಜೆಯನ್ನು ನಿರ್ವಹಿಸಿ 9 ದಿನಗಳ ಕಾಲ ಬಣ್ಣ ಬಣ್ಣದ ಸೀರೆಗಳನ್ನು ಉಟ್ಟು ಸಂಭ್ರಮಿಸುತ್ತಾರೆ.

**ದಾಂಡಿಯಾ ಮತ್ತು ಗಾರ್ಬಾ**

ದಾಂಡಿಯಾ ಮತ್ತು ಗಾರ್ಬಾ ಎಂಬುವುದು ಗುಜರಾತ ಮತ್ತು ರಾಜಸ್ಥಾನದ ಸಾಂಪ್ರದಾಯಿಕ ಜಾನಪದ ನೃತ್ಯ ರೂಪ. ಇದು ಕರ್ನಾಟಕದ ಮೇಲೆ ಕೂಡಾ ಬಹಳಷ್ಟು ಪ್ರಭಾವ ಬೀರಿದ್ದು ಈ ನೃತ್ಯ ಇಲ್ಲಿಯೂ ಜನಪ್ರಿಯವಾಗುತ್ತಿದೆ. ಇದು ಕೃಷ್ಣ ಮತ್ತು ರಾಧಾರ ಲೀಲೆ. ದಾಂಡಿಯಾ ರಾಸ್ ನೃತ್ಯದ ಹಲವಾರು ರೂಪಗಳಿವೆ. ಗುಜರಾತಿನಲ್ಲಿ ನವರಾತ್ರಿ ಸಮಯದಲ್ಲಿ ಇದರ ಪ್ರದರ್ಶನ ನೀಡಲಾಗುತ್ತದೆ. ಸಾಂಪ್ರದಾಯಕವಾದ ಉಡುಪುಗಳನ್ನು ಧರಿಸಿ ನೃತ್ಯ ಮಾಡುತ್ತಾರೆ. ದಾಂಡಿಯಾ ರಾಸ್ ಸಂಗೀತ, ಕೋಲಾಟದ ಮೂಲಕ ಕಳೆಗಟ್ಟುತ್ತದೆ. ಇದು ಸಂಕೀರ್ಣ ಜಾನಪದ ನೃತ್ಯ

▪ ಸುಷ್ಮಾ ಪವಾರ,
ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ,
ವಿಜಯಪೂರ

Scanned with CamScanner